ANE

**ಸಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ಅಡುಗೆಯವರು/ ಅಡುಗೆ ಸಹಾಯಕರ ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಏಕ ಕಾಲಕ್ಕೆ ಪರಿಶೀಲಿಸುವ ಬಗ್ಗೆ.**

ಬೀದರ್ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ **ಅಡುಗೆಯವರ/ ಅಡುಗೆ ಸಹಾಯಕರ ಹುದ್ದೆಗಳಿಗೆ** ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಅಭ್ಯರ್ಥಿಗಳ ಮೂಲ ದಾಖಲೆಗಳನ್ನು ಏಕ ಕಾಲಕ್ಕೆ ಪರಿಶೀಲನೆ ಮಾಡಲು ಉಲ್ಲೇಖಿತ ಸರ್ಕಾರದ ಆದೇಶದ ಮುಖಾಂತರ ಆದೇಶಿಸಿರುತ್ತಾರೆ. ಪ್ರಯುಕ್ತ **ದಿನಾಂಕ: 21-08-2017ರಂದು ಮಧ್ಯಾಹ್ನ 3.00 ಘಂಟೆಯಿಂದ 5:30ರವರೆಗೆ** ಈ ಕೆಳಕಂಡ ಮೂಲ ದಾಖಲೆಗಳೊಂದಿಗೆ **ಜಿಲ್ಲಾ ಕಛೇರಿ, ಹಿಂದುಳಿದ ವರ್ಗಗಳಕ ಕಲ್ಯಾಣ ಇಲಾಖೆ, ಜನವಾಡ ರಸ್ತೆ, ನಾವದಗೇರಿ ಬೀದರ್** ಇಲ್ಲಿಗೆ ಹಾಜರಾಗಲು ಸೂಚಿಸಿದೆ. **(ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08482-233148 ಇದಕ್ಕೆ ಸಂಪರ್ಕಿಸಬಹುದಾಗಿದೆ)**

1. ಎಸ್.ಎಸ್.ಎಲ್.ಸಿ/ ತತ್ಸಮಾನ ವಿದ್ಯಾರ್ಹತೆಯ ಅಂಕಪಟ್ಟಿ
2. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ ವರ್ಗಾವಣೆಯ ಪ್ರಮಾಣ ಪತ್ರ (ಟಿ.ಸಿ)/ಜನ್ಮದಿನಾಂಕವನ್ನು ತೋರಿಸುವಂತಹ ದಾಖಲೆಯ ಉದ್ಧೃತ ಭಾಗ
3. ಜಾತಿ/ ಆದಾಯ ಪ್ರಮಾಣ ಪತ್ರ (ಅನ್ವಯವಾಗುವವರಿಗೆ ಮಾತ್ರ) (ನಮೂನೆ 'ಡಿ', 'ಇ', 'ಎಫ್' ರಲ್ಲಿ)
4. ಅಂಗವಿಕಲ ಪ್ರಮಾಣ ಪತ್ರ (ಅನ್ವಯವಾಗುವವರಿಗೆ ಮಾತ್ರ)
5. ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ (ಅನ್ವಯವಾಗುವವರಿಗೆ ಮಾತ್ರ) ನಮೂನೆ-2
6. ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ಪ್ರವರ್ಗ-1 ಅಭ್ಯರ್ಥಿಗಳು ನಮೂನೆ-2ರಲ್ಲಿ (ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ರುಜು ಪಡೆದಿರಬೇಕು) ಹಾಗೂ ಸಾಮಾನ್ಯ ವರ್ಗದ ಗ್ರಾಮೀಣ ಮೀಸಲಾತಿ ಕೋರುವ ಅಭ್ಯರ್ಥಿಗಳು ನಮೂನೆ-2ರ ಪ್ರಮಾಣ ಪತ್ರದ ಜೊತೆಗೆ ನಮೂನೆ-1ರಲ್ಲಿ ತಹಸೀಲ್ದಾರ್ ರಿಂದ ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪಡೆದ ಪ್ರಮಾಣ ಪತ್ರ (ಅನ್ವಯಿಸುವವರಿಗೆ ಮಾತ್ರ)
7. ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ರುಜು ಪಡೆದಿರುವ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (1ನೇ ತರಗತಿಯಿಂದ 10ನೇ ತರಗತಿಯವರೆಗೆ) (ಅನ್ವಯಿಸುವವರಿಗೆ ಮಾತ್ರ)
8. ನಿರಾಕ್ಷೇಪಣಾ ಪತ್ರ (ಅನ್ವಯವಾಗುವವರಿಗೆ ಮಾತ್ರ)
9. ಹೈದ್ರಾಬಾದ್- ಕರ್ನಾಟಕ ಮೀಸಲಾತಿ ಪ್ರಮಾಣ ಪತ್ರ (ಅನ್ವಯವಾಗುವವರಿಗೆ ಮಾತ್ರ)
10. ಮಾಜಿ ಸೈನಿಕ ಪ್ರಮಾಣ ಪತ್ರ (ಅನ್ವಯವಾಗುವವರಿಗೆ ಮಾತ್ರ)
11. ಯೋಜನೆಯಿಂದ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿ ಪ್ರಮಾಣ ಪತ್ರ (ಅನ್ವಯವಾಗುವವರಿಗೆ ಮಾತ್ರ)
12. ಅಭ್ಯರ್ಥಿಯು **Voter ID/ Passport/DL/Pan Card/Bank Passbook/Aadhar Card etc...** ಇವುಗಳಲ್ಲಿ ಯಾವುದಾದರೂ ಒಂದು ಗುರುತಿನ ಚೀಟಿ ತರುವುದು.

ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾಗೂ
ಸದಸ್ಯ ಕಾರ್ಯದರ್ಶಿಗಳು, ಗ್ರೂಪ್-ಡಿ ನೌಕರರ
ಆಯ್ಕೆ ಸಮಿತಿ ಬೀದರ್.